



ಮೊದಲ ಬಾರಿಗೆ ಅಳಿಯ ಅತ್ತೆ ಮನೆಗೆ ಬಂದಾಗ.

ವಾರ ಪೂರ್ತಿ ಸೌತೆಕಾಯಿ ಪಲ್ಲೆ, ಸೌತೆಕಾತಿ ಗೊಜ್ಜು, ಸೌತೆಕಾಯಿ ದೋಸೆ, ಸೌತೆಕಾಯಿ ಚಟ್ನಿ, ಸೌತೆಕಾಯಿ ಜ್ಯೂಸ್, ಸೌತೆಕಾಯಿ ಇಡ್ಲಿ! ಎಂಟನೇ ದಿನಕ್ಕೆ 'ಇವತ್ತು ಏನು ಅಡಗಿ ಮಾಡ್ಲಿ ಅಳಿಯಂದಿರೇ' ಅಂದರು. ಅದಕ್ಕೆ ಅಳಿಯ 'ನೀವೇನೂ ತೊಂದರೆ ತೊಗೋಬ್ಯಾಡ್ರಿ ಸೌತೆಕಾಯಿ ಹೊಲ ತೋರಸ್ರಿ ನಾನೇ ಮೇಯ್ಕೊಂಡು ಬರ್ತೀನಿ' ಎಂದ.

★★★

ಬಾರಿನ ಮಾಲಿಕ: ನಮ್ಮ ಬಾರಿನಲ್ಲಿ ನಿತ್ಯ ಕುಡಿಯುವವರಿಗೆ ಮುಪ್ಪೇ ಬರುವುದಿಲ್ಲ!

ಗಿರಾಕಿ ಕಾಡಪ್ಪ: ಅಂದರೆ ನಿಮ್ಮ ಬಾರಿನಲ್ಲಿ ಅಮೃತ ಮಾರುತ್ತೀರೇನು?

ಬಾರಿನ ಮಾಲೀಕ: ಇಲ್ಲ, ಅವರು ಮುಪ್ಪು ಬರುವವರೆಗೆ ಬದುಕಿರುವುದೇ ಇಲ್ಲ!

★★★

ವಿನಯಾ: 500 ರೂಪಾಯಿ ನೋಟು ಬ್ಯಾನ್ ಮಾಡಿದ ನಂತರ ಲಂಚದ ಪಿಡುಗು ಕಡಿಮೆಯಾಯ್ತು ಅಲ್ಲವೆ?

ವಿಜಯಾ: ಇಲ್ಲ ಕಣೇ, ಆಗ 500 ರೂ. ಕೇಳುತ್ತಿದ್ದವರು ಈಗ ಡೈರೆಕ್ಟಾಗಿ 2000 ನೇ ಕೇಳುತ್ತಿದ್ದಾರೆ.

(ಸಂಗ್ರಹ) **ಕುಬೇರಪ್ಪ. ಎಂ. ವಿಭೂತಿ, ಹರಿಹರ**

ಬರ್ನಾರ್ಡ್‌ಷಾ ಒಂದು ಕಡೆ ಭಾಷಣ ಮಾಡುವಾಗ ಮೇಲಿಂದ ಮೇಲೆ ಪ್ಯಾಂಟನ್ನು ಮೇಲೇರಿಸಿಕೊಳ್ಳುತ್ತಿದ್ದರು.

ಅದನ್ನು ನೋಡಿದ ಒಬ್ಬಳು ಅಭಿಮಾನಿ ಹೇಳಿದಳು. 'ಇದು ನೋಡುವುದಕ್ಕೆ ಅಸಹ್ಯವಾಗಿದೆ.'

ತಕ್ಷಣ ಅವರು ಹೇಳಿದರು: 'ಕೈಬಿಟ್ಟರೆ ನೋಡಲು ಇನ್ನೂ ಅಸಹ್ಯವಾಗುತ್ತದೆ'.

★★★

ಜಡ್ಜ್: ಅವರಿಬ್ಬರು ಕುರ್ಚಿಗಳನ್ನು ಹಿಡಿದುಕೊಂಡು ಹೊಡೆದಾಡುತ್ತಿದ್ದಾಗ ನೀನೇಕಯ್ಯ ನೋಡ್ತಾ ಸುಮ್ಮನೆ ನಿಂತಿದ್ದೆ?

ಸಾಕ್ಷಿ: ಮಹಾಸ್ವಾಮಿ ಇನ್ನೇನು ಮಾಡಲಿ? ಅಲ್ಲಿ, ಇನ್ನೊಂದು ಕುರ್ಚಿ ಇರಲಿಲ್ಲ!

(ಸಂಗ್ರಹ) **ಮಹಾಂತೇಶ. ಎಸ್. ಪಾಟೀಲ, ಹುನಗುಂದ**



ಮರತೇಬಿಟ್ಟೆ!

ಆಟೋ ಡ್ರೈವರ್: ಸಾರಿ ಸಾರಿ ಮೀಟರ್ ಹಾಕೋದು ಮರತೇಬಿಟ್ಟೆ.

ಬಡ್ಡಿ ರಾಮಪ್ಪ: ಪರವಾಗಿಲ್ಲ ಬಿಡಿ, ನಾನು ಕೂಡಾ ಪರ್ಸ್ ತರೋದು ಮರತೇಬಿಟ್ಟೆ.

★★★

ಬಗ್ಗಿದಾರಲ್ಲ?

ಟೀಚರ್: ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ?

ಸ್ಟೂಡೆಂಟ್: ಯಾಕಾಗಲ್ಲ ಟೀಚರ್? ಚಿಕ್ಕ ವಯಸ್ಸಿನಲ್ಲಿ ಬಗ್ಗದ ನಮ್ಮ ಅಜ್ಜಿ ಈಗ ತುಂಬಾ ಬಗ್ಗಿದ್ದಾರಲ್ಲ!

(ಸಂಗ್ರಹ) **ಸಾವಿತ್ರಮ್ಮ ಕೆ. ವಿಭೂತಿ, ಹರಿಹರ**

